





# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ಪ್ರಧಾನ ಕೇಂದ್ರ, ಬೇಲೂರು ಮಠ:** ಕೇಂದ್ರ ಸರ್ಕಾರದ ಮಹಿಳಾ ಹಾಗೂ ಶಿಶುಕಲ್ಯಾಣ ಸಚಿವೆ ಸಚಿವೆ **ಸ್ಮೃತಿ ಜುಬಿನ್ ಇರಾನಿ** ಅವರ ಸೆಪ್ಟೆಂಬರ್ ೧೪ರಂದು ಬೇಲೂರು ಮಠಕ್ಕೆ ಭೇಟಿ ಕೊಟ್ಟರು.

**ಶಾಖಾಕೇಂದ್ರ ಹಾಗೂ ಉಪಕೇಂದ್ರಗಳು:** ಬೇಲೂರು ಮಠದ ನೇರ ಉಸ್ತುವಾರಿಯಿಂದ ಆರಂಭಗೊಂಡ **ದಕ್ಷಿಣೇಶ್ವರ** ಮಠವು ಇಲ್ಲಿಯವರೆಗೆ ಉಪ-ಕೇಂದ್ರವಾಗಿದ್ದು, ಈಗ ಪೂರ್ಣ ಕೇಂದ್ರವಾಗಿ ಪರಿವರ್ತನೆಯಾಗಿದೆ. **ಉಜ್ಜಯಿನಿಯಲ್ಲಿ** ಹೊಸ ರಾಮಕೃಷ್ಣ ಆಶ್ರಮವು ಆರಂಭವಾಗಿದೆ. ಸೋಮ್‌ಸರ್ ಕೇಂದ್ರದ ಉಪ-ಕೇಂದ್ರವಾಗಿ ಬಾಂಕುರ ಜಿಲ್ಲೆ **ಇಂಡಾಸ್**‌ನಲ್ಲಿ **‘ಶ್ರೀರಾಮಕೃಷ್ಣ-ಗೌರೀಪಂಡಿತ ಸ್ಮೃತಿ ಕೇಂದ್ರ**’ವು ಪರಿಗಣಿತವಾಗಿದೆ.

**ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವ:** ವಿವಿಧ ಕಾರ್ಯಕ್ರಮಗಳೊಂದಿಗೆ ಹೈದರಾಬಾದ್, ನರೇಂದ್ರಪುರ, ಪ್ರಯಾಗ್‌ರಾಜ್ ಹಾಗೂ ವಿವೇಕನಗರ (ಅಗರ್ತಲ) ಕೇಂದ್ರಗಳಲ್ಲಿ ಆಚರಿಸಲಾಯಿತು.

**ಶಾಖಾಕೇಂದ್ರಗಳ ಚಟುವಟಿಕೆಗಳ: ಭಾರತದಲ್ಲಿ**

**ನರೋತ್ತಮ ನಗರ:** ಸೆಪ್ಟೆಂಬರ್ ೧೧ರಂದು ಕೇಂದ್ರದ ಶತಮಾನೋತ್ಸವದ ಸಮಾರೋಪ ಸಮಾರಂಭವು ನಡೆಯಿತು. **ದಕ್ಷಿಣೇಶ್ವರ :** ಇಲ್ಲಿನ ನಿಯೋಜಿತ ಶ್ರೀರಾಮಕೃಷ್ಣ ಮಂದಿರದ ಶಿಲಾನ್ಯಾಸವನ್ನು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ನೆರವೇರಿಸಿದರು. ಸ್ವಾಮಿ ಅದ್ವೈತಾನಂದಜಿಯವರ ಜಯಂತಿಯ ದಿನವಾದ ಸೆಪ್ಟೆಂಬರ್ ೧೩ರಂದು ಈ ಕಾರ್ಯಕ್ರಮ ನಡೆಯಿತು. ಇದರಲ್ಲಿ ೮೦೦ ಮಂದಿ ಭಕ್ತರು ಹಾಗೂ ೧೭೫ ಮಂದಿ ಸಂನ್ಯಾಸಿಗಳು ಭಾಗವಹಿಸಿದ್ದರು. **ಕೈಲಾಸ ಶಹರ್:** ಸೆಪ್ಟೆಂಬರ್ ೧೮ರಂದು ಆಸ್ಪತ್ರೆ ಹಾಗೂ ಇತರ ವಿಭಾಗಗಳನ್ನೊಳಗೊಂಡ ಶಾರದಾ ಭವನವನ್ನು ಪ್ರಧಾನ ಕಾರ್ಯದರ್ಶಿಗಳು ಉದ್ಘಾಟಿಸಿದರು. **ಕಾಮಾರಪುಕುರ:** ಸೆಪ್ಟೆಂಬರ ೧೯ರಂದು ‘ಚಿನ್ನು ಶಾಂಖಾರಿಯ ಮನೆ ಹಾಗೂ ಗದಾಧರ ವಿದ್ಯಾಮಂದಿರ’ವನ್ನು ಪರಮಾಧ್ಯಕ್ಷರಾದ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಉದ್ಘಾಟಿಸಿದರು. **ನರೋತ್ತಮ ನಗರ:** ಹೊಸದಾಗಿ ನಿರ್ಮಿತವಾದ ಕಮಾನುದ್ವಾರ ‘ಬೋಧಿ ದ್ವಾರ’ವನ್ನು ಸೆಪ್ಟೆಂಬರ್ ೨೨ರಂದು ಉದ್ಘಾಟಿಸಲಾಯಿತು. **RKMVERI** (ಖಾಸಗಿ ವಿಶ್ವವಿದ್ಯಾಲಯ) ಘಟಿಕೋತ್ಸವವು ರಾಂಚಿ ಮೊರಬಾದಿ ಕೇಂದ್ರದಲ್ಲಿ ಸೆಪ್ಟೆಂಬರ್ ೨೭ರಂದು ನಡೆಯಿತು.

**ವಿದೇಶಗಳಲ್ಲಿ :** ಜರ್ಮನಿಯ **ಬರ್ಲಿನ್** ಕೇಂದ್ರದಲ್ಲಿ ಹೊಸ ಆಶ್ರಮ ಕ್ಯಾಂಪಸ್ಸಿನ ಉದ್ಘಾಟನೆಯು ಸೆಪ್ಟೆಂಬರ್ ೫ರಿಂದ ೧೦ರ ವರೆಗೆ ವಿವಿಧ ಕಾರ್ಯಕ್ರಮಗಳೊಂದಿಗೆ ಉದ್ಘಾಟಿಸಲ್ಪಟ್ಟಿತು. ಭಾರತದ ರಾಯಭಾರಿಗಳಾದ ಶೀ ಹರೀಶ್ ಪರ್ವತ ನೇನಿ, ಇತರ ಕೇಂದ್ರಗಳ ಸಂನ್ಯಾಸಿಗಳು ಹಾಗೂ ಭಕ್ತರುಗಳು ಭಾಗವಹಿಸಿದ್ದರು.

ಬಾಂಗ್ಲಾದೇಶದ **ದಿನಾಜ್‌ಪುರ್** ಕೇಂದ್ರವು ಸೆಪ್ಟೆಂಬರ್ ೭ ರಿಂದ ೯ರ ತನಕ ಶತಮಾನೋತ್ಸವವನ್ನು ಆಚರಿಸಿತು.






Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020